# ಅಮೇರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್** ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

## ಭಾಗ ೧೩

### ಚಿಕಾಗೋ ನಗರದ ಸುತ್ತಮುತ್ತ *(ಮುಂದುವರಿದ ಭಾಗ)*

ಸ್ವಾಮಿ ವಿವೇಕಾನಂದರು ಪ್ರಸಿದ್ಧವಾದ ಸರ್ವಧರ್ಮ ಸಮ್ಮೇಳನದ ನಂತರವೂ ಸುಮಾರು ಎರಡು ತಿಂಗಳುಗಳ ಕಾಲ ಚಿಕಾಗೋ ನಗರದಲ್ಲಿಯೇ ಉಳಿದುಕೊಂಡಿದ್ದರು. ಈ ಸಮಯದಲ್ಲಿ ಪಾಶ್ಚಾತ್ಯ ನಾಗರಿಕತೆಯ ಬಗೆಬಗೆಯ ಅಪೂರ್ವ ಸಾಧನೆಗಳ ಬಗ್ಗೆ ಅವರು ಆಳವಾಗಿ ಅಧ್ಯಯನ ಮಾಡಿದರು. ಹಾಗೂ ಚಿಕಾಗೋ ಮತ್ತು ಸುತ್ತಲಿನ ನಗರಗಳಲ್ಲಿ ಪ್ರವಚನಗಳನ್ನು ಮಾಡಿದರು. ಲ್ಯೂಸಿ ಮೋನ್ರೋ ಎಂಬ ಮಹಿಳೆ ಚಿಕಾಗೋ ನಗರದ 'ಕ್ರಿಟಿಕ್' ಎಂಬ ಪತ್ರಿಕೆಯ ವರದಿಗಾರಳಾಗಿದ್ದಳು. ಆಕೆಯು 'ಚಿಕಾಗೋ ಪತ್ರ' ಎಂಬ ಒಂದು ವರದಿಯಲ್ಲಿ ಹೀಗೆ ಬರೆಯುತ್ತಾಳೆ:

''ಸ್ವಾಮಿ ವಿವೇಕಾನಂದರು ಈ ದೇಶಕ್ಕೆ ಮೊದಲು ಬಂದಾಗ ಇಟ್ಟುಕೊಂಡಿದ್ದ ಉದ್ದೇಶವೆಂದರೆ ಹಿಂದೂಗಳ ಮಧ್ಯೆ ನೂತನ ಉದ್ಯಮಗಳನ್ನು ಸ್ಥಾಪಿಸುವಂತೆ ಅಮೆರಿಕನ್ನರನ್ನು ಉತ್ತೇಜಿಸುವುದು. ಆದರೆ ಅವರು ಈ ಉದ್ದೇಶವನ್ನು ಸದ್ಯಕ್ಕೆ ತ್ಯಜಿಸಿದ್ದಾರೆ. ಭಾರತದ ಬಡವರ ಬಗ್ಗೆ ಕೇಳಿದರೆ, ಅವರು ಹೇಳುತ್ತಾರೆ, 'ಬಡ ಜನರು ತಮ್ಮ ದೇಶದಲ್ಲಿ ರಾಜಕುಮಾರನಂತೆ ಇದ್ದಾರೆ, ಅವರು ಸಮಾಧಾನದ, ಸಂತೋಷದ ಬಾಳನ್ನು ಬಾಳುತ್ತಾರೆ' ಎಂದು. ಸ್ವಾಮಿ ವಿವೇಕಾನಂದರು ತಮ್ಮ ಜನಾಂಗದ ಮೂರ್ತಿವೆತ್ತವರಾಗಿದ್ದಾರೆ. ಅವರ ಸಂಸ್ಕೃತಿ, ಅವರ ವಾಕ್‌ಶಕ್ತಿ ಮತ್ತು ಆಕರ್ಷಕ ವ್ಯಕ್ತಿತ್ವಗಳು ಭವ್ಯ ಹಿಂದೂ ನಾಗರಿಕತೆಯ ಬಗ್ಗೆ ನಮಗೆ ಪರಿಚಯವನ್ನು ಮಾಡಿಕೊಡುತ್ತವೆ. ಅವರದು ಆಸಕ್ತಿಯನ್ನು ಕೆರಳಿಸುವ ವ್ಯಕ್ತಿತ್ವ, ಅವರದು ಬುದ್ಧಿಮತ್ತೆಯನ್ನು ಹೊರಸೂಸುವ ಸುಂದರವಾದ ಮುಖ. ಅವರದು ಸಂಗೀತದಂತೆ ಕೇಳಿಸಿಕೊಳ್ಳುವ ಮಧುರವಾದ ಧ್ವನಿ. ಅವರು ಸಾಹಿತ್ಯ ಕೂಟಗಳಲ್ಲಿ ಭಾಷಣ ಮಾಡುವರು; ಚರ್ಚುಗಳಲ್ಲಿ ಪ್ರವಚನ ಮಾಡುವರು. ಅವರು ಯಾವುದೇ ಟಿಪ್ಪಣಿಗಳಿಲ್ಲದೆ ನಿರರ್ಗಳವಾಗಿ ಮಾತನಾಡುತ್ತಾರೆ. ತಾವು ಹೇಳುವ ವಾಸ್ತವಿಕ ಸಂಗತಿಗಳನ್ನು ಮತ್ತು ತಮ್ಮ ನಿರ್ಣಯಗಳನ್ನು ಉನ್ನತ ಕಲಾತ್ಮಕ ಶೈಲಿಯಲ್ಲಿ ಪ್ರಸ್ತುತಪಡಿಸುತ್ತಾರೆ. ಅವರ ಭಾಷಣದಲ್ಲಿ ಇತರರನ್ನು ಒಪ್ಪಿಸುವಂಥ ಪ್ರಾಮಾಣಿಕತೆ ಕಾಣಬರುತ್ತದೆ. ಭಾಷಣದ ಉದ್ದಕ್ಕೂ ಶ್ರೀಮಂತವಾದ, ಸ್ಫೂರ್ತಿದಾಯಕವಾದ ವಾಗ್‌ಪ್ರತಿಭೆ ಹೊರಹೊಮ್ಮುತ್ತಿರುತ್ತದೆ.''

ಭಾರತದಲ್ಲಿ ಉದ್ಯಮಗಳನ್ನು ಸ್ಥಾಪಿಸುವ ಕಾರ್ಯವನ್ನು ಸ್ವಾಮಿ ವಿವೇಕಾನಂದರು ತ್ಯಜಿಸಿದರು ಎನ್ನುವ ವಿಷಯ ಅವರು ಜಾನ್ ಹೆನ್ರಿ ರೈಟ್ ಅವರಿಗೆ ಬರೆದ ಪತ್ರದಲ್ಲಿ ಸ್ಪಷ್ಟವಾಗಿ ತಿಳಿದು ಬರುತ್ತದೆ. ಸ್ವಾಮೀಜಿ ಚಿಕಾಗೋ ನಗರದಲ್ಲಿ ಬಹಳ ಕಾಲ ಇದ್ದರು. ಹಲವಾರು ಕಡೆ ಭಾಷಣಗಳನ್ನು ಮಾಡಿದರು. ಆದರೆ ಭಾಷಣ ಮಾಡಿದ ಒಂದು ನಿರ್ದಿಷ್ಟ ಮಾಹಿತಿ ಮಾತ್ರ ನಮಗೆ ಸಿಗುತ್ತದೆ. ಒಂದು ಪತ್ರದಲ್ಲಿ ಅವರು ಬರೆಯುತ್ತಾರೆ: ''ನಾಳೆ (ಅಕ್ಟೋಬರ್ ೨೭) ನಾನು ಮಹಿಳೆಯರ ಕೂಟವೊಂದರಲ್ಲಿ ಬೌದ್ಧ ಧರ್ಮದ ಬಗ್ಗೆ ಮಾತನಾಡುತ್ತೇನೆ.'' ಸ್ವಾಮೀಜಿಯವರ ಪ್ರವಚನದ ವರದಿಯನ್ನು ಈ ಮಹಿಳೆಯರ ಕೂಟದ ೧೮೯೩ ನೆಯ ಇಸವಿಯ ದಾಖಲೆಯ ಪುಸ್ತಕದಲ್ಲಿ ನಾವು ಕಾಣಬಹುದು. ಚಿಕಾಗೋ ನಗರದಲ್ಲಿ ಸ್ವಾಮೀಜಿ ಮಾಡಿದ ಭಾಷಣಗಳಲ್ಲಿ ಖಚಿತವಾಗಿ ನಮಗೆ ತಿಳಿದುಬರುವ ಮಾಹಿತಿ ಇದೊಂದೇ.

ಇದಲ್ಲದೆ ಸ್ವಾಮೀಜಿ ಅಕ್ಕಪಕ್ಕದ ನಗರಗಳಿಗೂ ಹೋಗಿ ಬಂದರು. ಅಲ್ಲಿನ ಕಾರ್ಯಕ್ರಮಗಳ ಬಗ್ಗೆ ನಮಗೆ ಸಮಕಾಲೀನ ವೃತ್ತಪತ್ರಿಕೆಗಳ ವರದಿಗಳು ಲಭ್ಯವಾಗಿವೆ. ಸ್ವಾಮೀಜಿ ಅಕ್ಟೋಬರ್ ೨೦ರಂದು ಎವನ್ಸ್ಟನ್ ಎಂಬ ನಗರಕ್ಕೆ ಭೇಟಿಕೊಟ್ಟರು. *'ಇಂಡೆಕ್ಸ್'* ಎಂಬ ಪತ್ರಿಕೆಯು ಸ್ವಾಮೀಜಿ ಮಾಡಿದ ಭಾಷಣದ ಬಗ್ಗೆ ತನ್ನ ಅಕ್ಟೋಬರ್ ೭೮ ಸಂಚಿಕೆಯಲ್ಲಿ ವರದಿ ಮಾಡಿತು; *'ಸೆನೆಟರ್ ಡೈಲಿ ಪ್ರೆಸ್'* ಎನ್ನುವ ಪತ್ರಿಕೆಯು ಅಕ್ಟೋಬರ್ ೫೮ ಪತ್ರಿಕೆಯಲ್ಲಿ ವರದಿ ಮಾಡಿತು. ಹಾಗೆಯೇ *'ಡೈಲಿ ಫ್ರೀ ಪ್ರೆಸ್'* ಎನ್ನುವ ಪತ್ರಿಕೆಯ ಅಕ್ಟೋಬರ್ ೯೮ ಸಂಚಿಕೆಯಲ್ಲಿ ವರದಿ ಮಾಡಿತು.

ಹೀಗೆ ಸ್ವಾಮೀಜಿ ಎಲ್ಲಿ ಹೋದರೂ, ಅಲ್ಲಿ ಅಮೆರಿಕೆಯ ಪತ್ರಿಕೆಗಳು ಅವರ ಆಗಮನವನ್ನು ಉತ್ಸಾಹದಿಂದ ಘೋಷಿಸಿದವು. ಹಾಗೆಯೇ, ಅವರ ಭಾಷಣದ ವರದಿಯಲ್ಲಿ ವಿಸ್ತತವಾಗಿ ವರದಿ ಮಾಡಿದವು.

ಇಷ್ಟೊಂದು ಚಟುವಟಿಕೆಗಳ ಮಧ್ಯೆ ಇದ್ದರೂ, ಸ್ವಾಮೀಜಿ ತಮ್ಮ ಅಂತರ್ಮುಖತೆಯನ್ನೂ, ಧ್ಯಾನಭಾವನೆಯನ್ನೂ ಕಾಪಾಡಿಕೊಂಡಿದ್ದರು. ಇದು ನಮಗೆ ಹಲವು ಮೂಲಗಳಿಂದ ತಿಳಿದು ಬರುತ್ತದೆ. ಎಡೆಬಿಡದ ಪ್ರಯಾಣದ ನಡುವೆಯೂ, ಪ್ರವಚನಗಳ ಸರಣಿಯ ನಡುವೆಯೂ ಸ್ವಾಮೀಜಿ ತಮ್ಮ ಆಧ್ಯಾತ್ಮಿಕ ಸಾಕ್ಷಾತ್ಕಾರದ ಆನಂದದಲ್ಲಿ ಮುಳುಗಿಹೋಗಿದ್ದರು. ಒಂದು ಪತ್ರದಲ್ಲಿ ಶ್ರೀಮತಿ ಹೇಲ್ ಸ್ವಾಮೀಜಿಯವರ ಬಗ್ಗೆ ಹೀಗೆ

ಬರೆಯುತ್ತಾಳೆ: ''ಒಬ್ಬ ಮಹಾನ್ ಮತ್ತು ಭವ್ಯ ವ್ಯಕ್ತಿಯು ಸರ್ವಧರ್ಮ ಸಮ್ಮೇಳನಕ್ಕೆ ಬಂದಿದ್ದನು. ಆತನು ಭಗವಂತನ ಪ್ರೇಮದಿಂದ ತುಂಬಿಹೋಗಿದ್ದನು; ಆತನ ಮುಖವು ದಿವ್ಯಪ್ರಭೆಯಿಂದ ಬೆಳಗುತ್ತಿತ್ತು. ಅವರ ಮಾತುಗಳು ಅಗ್ನಿಪುಂಜಗಳ ಹಾಗೆ ಇದ್ದವು. ಅವರ ಸಾನ್ನಿಧ್ಯಮಾತ್ರವು ಸಾಮರಸ್ಯ ಮತ್ತು ಪವಿತ್ರತೆಯ ವಾತಾವರಣವನ್ನು ಮೂಡಿಸಿತ್ತು. ಈ ಕಾರಣಗಳಿಂದಾಗಿ ಅವರು ಎಲ್ಲ ಜನರನ್ನೂ ತಮ್ಮೆಡೆಗೆ ಆಕರ್ಷಿಸಿದ್ದರು.''

ಸ್ವಾಮೀಜಿಯವರ ಆಗಿನ ಕಾಲದ ಒಂದು ಚಿತ್ರವನ್ನು ನೋಡಿದಾಗ ಶ್ರೀಮತಿ ಹೇಲ್ ಅವರ ಮಾತು ಅದೆಷ್ಟು ಸತ್ಯ ಎನ್ನುವುದು ಗೊತ್ತಾಗುತ್ತದೆ. ಆ ಚಿತ್ರದಲ್ಲಿರುವ ಸ್ವಾಮೀಜಿಯವರ ಮುಖದಲ್ಲಿ ಮಗುವಿನಂಥ ಮುಗ್ಧತೆಯನ್ನು, ಅದ್ಭುತ ಶಾಂತಿ ಮತ್ತು ನೀರವತೆಯನ್ನು ಕಾಣುತ್ತೇವೆ. ಈ ಚಿತ್ರದ ಹಕ್ಕನ್ನು ವಾಷಿಂಗ್‌ಟನ್ ನಗರದ ಒಬ್ಬ ಛಾಯಾಗ್ರಾಹಕನು ಪಡೆದುಕೊಂಡಿದ್ದನು. ಈ ಛಾಯಾಚಿತ್ರವನ್ನು ತೆಗೆದದ್ದು ಪ್ರಾಯಶಃ ಸರ್ವಧರ್ಮ ಸಮ್ಮೇಳನದ ಮೊದಲನೆಯ ದಿನದಂದು; ಸ್ವಾಮಿ ವಿವೇಕಾನಂದರು ಪ್ರಸಿದ್ಧರಾದ ನಂತರ.

ಮೇಲಿನ ಚಿತ್ರವು ನಮಗೆ ಸಿಕ್ಕಿದುದು ಸ್ವಾಮೀಜಿಯವರ ಒಟ್ಟು ಆರು ಛಾಯಾಚಿತ್ರಗಳ ಒಂದು ಗುಚ್ಛದಲ್ಲಿ. ಅವೆಲ್ಲವನ್ನೂ ತೆಗೆದದ್ದು ಸೆಪ್ಟೆಂಬರ್ ೧೮೯೩ರಲ್ಲಿ ಎನ್ನುವುದು ಖಚಿತವಾದ ವಿಚಾರ. ಅವುಗಳಲ್ಲಿ ಒಂದು ಚಿತ್ರ ಪ್ರಸಿದ್ಧವಾದುದು. ಇದರಲ್ಲಿ ಸ್ವಾಮೀಜಿ ತಮ್ಮ ಭುಜಗಳನ್ನು ತಮ್ಮ ಎದೆಯ ಭಾಗದಲ್ಲಿ ಜೋಡಿಸಿಕೊಂಡು ನಿಂತಿದ್ದಾರೆ. ಸರ್ವಧರ್ಮ ಸಮ್ಮೇಳನದ ದಿನಗಳಲ್ಲಿ ಇದನ್ನು ವರ್ಣಮಯ ಪೋಸ್ಟರ್ ಆಗಿ ಉಪಯೋಗಿಸಲಾಗಿತ್ತು. ಎಲ್ಲ ಆರು ಚಿತ್ರಗಳಿಗೂ ಸ್ವಾಮೀಜಿ ತಮ್ಮ ಹಸ್ತಾಕ್ಷರವನ್ನು ಹಾಕಿದ್ದಾರೆ. ಕೆಲವೊಂದು ಛಾಯಾಚಿತ್ರಗಳಲ್ಲಿ ಸಂಸ್ಕೃತ ಶ್ಲೋಕಗಳನ್ನು ತಮ್ಮ ಹಸ್ತಾಕ್ಷರದಲ್ಲಿ ಬಂಗಾಳಿ ಲಿಪಿಯಲ್ಲಿ ಬರೆದಿದ್ದಾರೆ ಮತ್ತು ಅವುಗಳ ಇಂಗ್ಲಿಷ್ ಅನುವಾದವನ್ನು ನೀಡಿದ್ದಾರೆ. ಈ ವಾಕ್ಯಗಳು ಹೀಗಿವೆ:

ಚಿತ್ರ ೧



**೧. ಮೊದಲನೆಯ ಚಿತ್ರ : ಅಜರಾಮರವತ್ ಪ್ರಾಜ್ಞಃ ವಿದ್ಯಾಮ್ ಅರ್ಥಂ ಚ ಸಾಧಯೇತ್ (ಚಿಂತಯೇತ್) ।**
**ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್ ॥**

'ವಿದ್ಯೆಯನ್ನು ಮತ್ತು ಧನವನ್ನು ಯಾವತ್ತೂ ಸಾವಿಲ್ಲದೆ ಇರುತ್ತೇನೆ, ಯಾವತ್ತೂ ರೋಗವಿಲ್ಲದೆ ಇರುತ್ತೇನೆ ಎಂಬ ಭಾವನೆಯೊಂದಿಗೆ ಗಳಿಸಿಕೊಳ್ಳಬೇಕು. ಆದರೆ ಧರ್ಮವನ್ನು ಮಾತ್ರ ಮರಣವು ಜುಟ್ಟು ಹಿಡಿದು ಎಳೆಯುತ್ತಿರುಂತೆ ಶೀಘ್ರವೇ ಆಚರಿಸಬೇಕು.'

**೨. ಎರಡನೆಯ ಚಿತ್ರ : ಏಕ ಏವ ಸುಹೃದ್ ಧರ್ಮ, ನಿಧನೇಽಪಿ ಅನುಯಾತಿ ಯಃ ॥**

ಚಿತ್ರ ೨



'ಧರ್ಮವೊಂದೇ ನಿನ್ನ ಏಕಮಾತ್ರ ಸ್ನೇಹಿತ. ಅದು ನಿನ್ನ ಸಾವಿನ ನಂತರವೂ ಹಿಂಬಾಲಿಸುತ್ತದೆ. ಉಳಿದೆಲ್ಲವೂ ಮರಣದೊಂದಿಗೆ ಅಂತ್ಯಗೊಳ್ಳುತ್ತವೆ.'

**೩. ಮೂರನೆಯ ಚಿತ್ರ :** 'ಅನಂತವಾದ, ಪರಿಶುದ್ಧವಾದ, ಪವಿತ್ರವಾದ, ಎಲ್ಲ ಆಲೋಚನೆಗಳಿಗೂ ಮೀರಿದ, ಎಲ್ಲ ಗುಣಗಳನ್ನೂ ಮೀರಿದ ನಿನಗೆ ನಾನು ನಮಸ್ಕರಿಸುತ್ತೇನೆ. '

**೪. ನಾಲ್ಕನೆಯ ಚಿತ್ರ : ಸಮತಾ ಸರ್ವಭೂತೇಷು ಏತತ್ ಮುಕ್ತಸ್ಯ ಲಕ್ಷಣಮ್ ॥**

'ಎಲ್ಲ ಜೀವಿಗಳಲ್ಲಿಯೂ ಸಮಭಾವವನ್ನು ತೋರುವುದು ಮುಕ್ತಪುರುಷನ ಲಕ್ಷಣ.'

**೫. ಐದನೆಯ ಚಿತ್ರ :** 'ನೀನೊಬ್ಬನೇ ಈ ಜಗತ್ತಿನ ಏಕಮಾತ್ರ ಧನದ ಗಣಿಯಾಗಿದ್ದೀಯೆ.'



ಚಿತ್ರ ೩



ಚಿತ್ರ ೪



ಚಿತ್ರ ೫

**೬. ಆರನೆಯ ಚಿತ್ರ :** 'ಓ ಪ್ರಭುವೇ, ನೀನೇ ತಂದೆ, ನೀನೇ ತಾಯಿ, ನೀನೇ ಪತಿ, ನೀನೇ ಪ್ರೇಮರೂಪ.'

ಈ ಮೇಲಿನ ಛಾಯಾಚಿತ್ರಗಳು ನಮಗೆ ದೊರೆತಿರುವುದು ಕೂಡ ಒಂದು ವಿಸ್ಮಯವಾದ ಪ್ರಸಂಗದ ಮೂಲಕ. ಸ್ವಾಮಿ ವಿಶ್ವಾನಂದರು ಚಿಕಾಗೋದ ವಿವೇಕಾನಂದ ವೇದಾಂತ ಕೇಂದ್ರದ ಅಧ್ಯಕ್ಷರಾಗಿದ್ದರು. ಅವರ ಮೂಲಕ ಮೇಲಿನ ಚಿತ್ರಗಳು ಮತ್ತು ಇನ್ನಿತರ ಅಮೂಲ್ಯವಾದ ಕಾಗದಪತ್ರಗಳು ನಮಗೆ ಲಭಿಸಿವೆ. ಇದನ್ನು ಸ್ವಾಮಿ ವಿಶ್ವಾನಂದರು ಹೇಗೆ ಪಡೆದುಕೊಂಡರು ಎನ್ನುವುದು ಆಸಕ್ತಿಕರವಾದ ವಿಷಯ. ಒಬ್ಬ ಯುವಕನಿಗೆ ಕೆಲವು ಪ್ರಕಟವಾಗಿರದ ಕಾಗದಪತ್ರಗಳ ಬಂಡಲು ಆತನ ಅಜ್ಜಿಯಿಂದ ಬಳುವಳಿಯಾಗಿ ಬಂದಿತ್ತು. ಅವನೇನೂ ವೇದಾಂತದಲ್ಲಿ ಆಸಕ್ತಿ ಇರುವವನಾಗಿರಲಿಲ್ಲ. ತನ್ನ ಅಜ್ಜಿ ಅವುಗಳನ್ನು ಬಹಳ ಜಾಗರೂಕತೆಯಿಂದ ಕಾಪಾಡಿಕೊಂಡಿದ್ದಳು. ಅವಳ ಮೇಲಿನ ಗೌರವಕ್ಕಾಗಿ ಅವನು ಅವುಗಳನ್ನು ರಕ್ಷಿಸಿಕೊಂಡಿದ್ದನು. ಅವುಗಳನ್ನು ಕಾಲಾಂತರದಲ್ಲಿ ಅವನು ಎಸೆದು ಬಿಡುತ್ತಿದ್ದನೇನೋ. ಆದರೆ ಅದೃಷ್ಟವಶಾತ್ ಈ ಕಾಗದಪತ್ರಗಳ ಗಂಟಿನ ಬಗ್ಗೆ ಆತನ ಒಬ್ಬ ಸ್ನೇಹಿತೆಗೆ ತಿಳಿದುಬಂತು. ಆಕೆ ವೇದಾಂತ ಸೊಸೈಟಿಯ ಭಕ್ತಳಾಗಿದ್ದಳು. ಆಕೆ ಈ ವಿಷಯವನ್ನು ಸ್ವಾಮಿ ವಿಶ್ವಾನಂದರಿಗೆ ಹೇಳಿದಳು. ಸ್ವಾಮಿಗಳು ಆ ಯುವಕನ ಮನೆಗೆ ಹೋದರು. ಕಾಗದಪತ್ರಗಳ ಬಂಡಲನ್ನು ಪರೀಕ್ಷಿಸಿದರು. ಅದೆಲ್ಲವೂ ಶ್ರೀ ಮತ್ತು ಶ್ರೀಮತಿ ಹೇಲ್ ದಂಪತಿಗಳ ಸಂಬಂಧಿಯಾಗಿದ್ದ ಮೆಕೆಂಡ್ಲಿ ಸಹೋದರಿಯರಿಗೆ ಸೇರಿದ ಕಾಗದಪತ್ರಗಳು ಎನ್ನುವುದು ಸ್ವಾಮಿ ವಿಶ್ವಾನಂದರಿಗೆ ತಿಳಿದುಬಂತು. ಇದೊಂದು ದೊಡ್ಡ ಆವಿಷ್ಕಾರವೇ ಆಗಿತ್ತು. ಆ ಯುವಕನು ತನ್ನ ಸುಪರ್ದಿಯಲ್ಲಿದ್ದ ಈ ಕಾಗದಪತ್ರಗಳನ್ನು ಸಂತೋಷದಿಂದ ಸ್ವಾಮಿ ವಿಶ್ವಾನಂದರಿಗೆ ನೀಡಿದನು. ಈ ರೀತಿ ಅನೇಕ ಸಂದರ್ಭಗಳಲ್ಲಿ ಸ್ವಾಮಿ ವಿವೇಕಾನಂದರ ಬಗೆಗಿನ ಹಲವಾರು ಮಾಹಿತಿಗಳು ಮತ್ತು ಕಾಗದಪತ್ರಗಳು ನಮಗೆ ಲಭ್ಯವಾಗಿವೆ. ಇದರಿಂದಾಗಿ ಅವರ ಬಗೆಗಿನ ಸಂಶೋಧನೆಗೆ ಅನುಕೂಲವಾಗಿದೆ.

ಇನ್ನು ಸ್ವಾಮೀಜಿಯವರು ಚಿಕಾಗೋದಲ್ಲಿ ಕಳೆದ ಆ ದಿನಗಳ ಬಗ್ಗೆ ನೋಡೋಣ. ಆ ಸಮಯದಲ್ಲಿ ಸ್ವಾಮೀಜಿಯವರ ಮನಃಸ್ಥಿತಿ ಹೇಗಿತ್ತು? ಇದರ ಸ್ಪಷ್ಟಚಿತ್ರಣವನ್ನು ಸ್ವಾಮೀಜಿಯವರ ಆಪ್ತಶಿಷ್ಯರಾಗಿದ್ದ ಶರತ್‌ಚಂದ್ರ ಚಕ್ರವರ್ತಿಯವರು ಸ್ವಾಮಿ ವಿಶ್ವಾನಂದರಿಗೆ ೧೯೩೭ ರಲ್ಲಿ ಬರೆದಿರುವ ಪತ್ರದಲ್ಲಿ ನಾವು ಕಾಣಬಹುದು. ಈ ಪತ್ರದಲ್ಲಿ ಚಕ್ರವರ್ತಿಯವರು ಹೀಗೆ ಬರೆಯುತ್ತಾರೆ:



ಚಿತ್ರ ೬

''ಸ್ವಾಮೀಜಿಯವರು ನನಗೆ ಒಂದು ಬಾರಿ ಹೇಳಿದರು. ಒಂದು ರಾತ್ರಿ ಚಂದ್ರನ ಬೆಳಕಿನಲ್ಲಿ ಅವರು ಲೇಕ್ ಮಿಚಿಗನ್ ಸರೋವರದ ದಡದಲ್ಲಿ ಕುಳಿತು ಧ್ಯಾನ ಮಾಡುತ್ತಿದ್ದರು. ಒಡನೆ ಅವರಿಗೆ ಶ್ರೀರಾಮಕೃಷ್ಣರ ದರ್ಶನವಾಯಿತು. ಆಗ ಸ್ವಾಮೀಜಿ ತಾವು ಜಗತ್ತಿಗೆ ಬಂದ ಉದ್ದೇಶವನ್ನು ನೆನಪಿಸಿಕೊಂಡರು. ಅವರ ಮನಸ್ಸು ನಿಧಾನವಾಗಿ ಬಹಿರ್ಮುಖವಾಯಿತು. ಅವರು ಮತ್ತೆ ತಮ್ಮ ಕಾರ್ಯದ ಸಫಲತೆಯ ಕಡೆಗೆ ಮನಸ್ಸನ್ನು ಕೊಟ್ಟರು. ಇದನ್ನು ನಾನು ನನ್ನ ದಿನಚರಿಯಲ್ಲಿ ನಮೂದಿಸಿಕೊಂಡಿದ್ದೇನೆ. ಆದರೆ ಅದನ್ನು ಪ್ರಕಟಿಸುವ ಆವಶ್ಯಕತೆ ಇಲ್ಲ ಎಂದು ನನಗೆ ಅನ್ನಿಸಿತ್ತು. ಆದ್ದರಿಂದ ಈ ವಿಷಯದ ಬಗ್ಗೆ ಈಗಿನವರೆಗೆ ನಾನೆಲ್ಲೂ ಬರೆದಿಲ್ಲ. ನಾನು ನಿಮಗೆ ಮಾತ್ರವೇ ಈ ವಿಷಯವನ್ನು ತಿಳಿಸುತ್ತಿದ್ದೇನೆ.''

***(ಮುಂದುವರಿಯುವುದು)***